KA / BG-GPO / 2515 / WPP-47 / 2009-2011



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ಏಪ್ರಿಲ್ ೨, ೨೦೦೯ (ಚೈತ್ರ ೧೨, ಶಕ ವರ್ಷ ೧೯೩೧)	ಸಂಚಿಕೆ ೧೪

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

OFFICE OF THE EXECUTIVE ENGINEER, NH DIVISION, BANGALORE

INVITATION FOR BIDS

IFB No.: 15/2008-09, Dated: 28th February 2009

1. The Executive Engineer, NH Division, No: 14/3, 4th Floor, CFC Building, NT Road, Bangalore- 01 invites Bids for the construction of works detailed in the table. The bidders may submit bids for the following work:-

TABLE

Package No.	Name of work	Approximte value of work (Rs.)	Earned Money Deposit (Rs.)	Cost of document (Rs.)	Period of completion
1.	Widening and Strengthening to two lane from Km.312 to 318.00 & 346.50 to 353.00 of NH-209, Dindigul-Bangalore section	Rs.1241 lakhs	Rs.24.82 lakhs	Rs.15000/- + Tax	12 Months including Monsoon

2. Bidding documents (and additional copies) may be purchased from the office of Executive Engineer, NH Division, No:14/3, 4th Floor, CFC Building, NT Road, Bangalore-01 from 2.4.2009 to 4.4.2009 for a non-refundable fee (for two sets) as indicated, in the form of cash or Demand Draft/Pay Order on any Nationalized/ Scheduled bank payable at Bangalore in favour of Executive Engineer, NH Division, Bangalore. Interested bidders may obtain further information at the same address. Bidding documents requested by mail will be dispatched by registered/speed post on payment of an extra amount of Rs.500/- The Executive Engineer, NH Division, Bangalore will not be held responsible for the postal delay if any, in the delivery of the documents or non-receipt of the same.

3. Bids must be accompanied by security of the amount specified for the work in the Table below. payable at Bangalore and drawn in favour of Executive Engineer, NH Division, Bangalore Bid security will have to be in any one of the forms as specified in the bidding document and shall have to be valid for 45 days beyond the validity of the tender.

4. Bids must be delivered to O/o the Executive Engineer, NH Division, Bangalore on or before 16.00 hours on 4.4.2009 and will be opened on the same day at 16.30 hours (if possible), in the presence of the Bidders who wish to attend. If the office happens to be closed on the date of receipt of the bids as specified, the bids will be received and opened on the next working day at the same time and venue.

5. A Pre-tender meeting will be held on 2.4.2009 at 11.30 hours at the office of Superintending Engineer, NH Circle, Bangalore to clarify the issues if any, and to answer questions on any matter that may be raised at that stage as stated in Clause 9.2 of 'Instructions to Bidder's of the bidding document.

6. Other details can be accessed on the web site: www.kpwd.gov.in or can be obtained in the office during office hours.

P.R. 254 Executive Engineer, NH Division, Bangalore.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಅವಧಿ ವಿಸ್ತರಣೆ

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–3ರ ಅನ್ವಯ ಗುತ್ತಿಗೆ ಆಹ್ವಾನ)

ಕ್ರ.ಸಂ.ಸನೀ.ವಿ.ಬೆಳಗಾವಿ/ಸ.ಇಂ& ಕಿ.ಇಂ./ಟೆಂಡರ್/2008–09/829, ದಿ: 27ನೇ ಫೆಬ್ರವರಿ 2009

ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಸಂ.ಸನೀ.ವಿ.ಬೆಳಗಾವಿ/ಸ.ಇಂ&ಕಿ.ಇಂ. /ಟೆಂಡರ್/2008–09/419 ದಿನಾಂಕ:14.02.09ರಲ್ಲಿ ಆಹ್ವಾನಿಸಲಾದ ಕೆಳಗಿನ ಕಾಮಗಾರಿಗಳ ಟೆಂಡರಿನ ದಿನಾಂಕಗಳನ್ನು ಈ ಕೆಳಗಿನಂತೆ ಮುಂದೂಡಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು
1	2
1.	ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಅವರಾಧಿ ಗ್ರಾಮದ ಹತ್ತಿರ ಘಟಪ್ರಭ ನದಿಗೆ ಇರುವ ಬಿ.ಸಿ.ಬಿ.ಯನ್ನು 2 ಮೀಟರ್ ಎತ್ತರಿಸುವುದು.
2.	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಐನಾಪೂರ–ಶೇಡಬಾಳ ರಸ್ತೆಯ ಲಕ್ಷ್ಮಿಗುಡಿಯ ಹತ್ತಿರ ಕಲ್ಲಾಳ ಹಳ್ಳಕ್ಕೆ ಬ್ರಿಡ್ಜ್–ಕಂ–ಬ್ಯಾರೇಜ್ ನಿರ್ಮಾಣ
3.	ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದ ಹತ್ತಿರ ಎಲ್ಲಮ್ಮನ ಹಳ್ಳಕ್ಕೆ ಇಂಗು ಕೆರೆ ನಿರ್ಮಾಣ
4.	ಬೆಳಗಾವಿ ಜಿಲ್ಲೆ ಮತ್ತು ತಾಲೂಕಿನ ಹಿಂಡಲಗಾ ಹತ್ತಿರ ಮಾರ್ಕಂಡೆಯ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ
5.	ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಘಸ್ಟೋಳ್ಳಿ ಸ.ನೀ.ಕೆರೆ ಸುಧಾರಣೆ
6.	ಬೆಳಗಾವಿ ಜಿಲ್ಲೆ ಮತ್ತು ತಾಲೂಕಿನ ಯಳ್ಳೂರ ಸ.ನಂ.1080 ಸ.ನೀ.ಕೆರೆ ಸುಧಾರಣೆ
7.	ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಸಾಗರೆ ಹತ್ತಿರ ತಟ್ಟಿ ಹಳ್ಳಕ್ಕೆ ಸೇತುವೆ ಸಹಿತ ಬಾಂದಾರ ನಿರ್ಮಾಣ.

1. ಖುಲ್ಲಾ ಟೆಂಡರ್ ಫಾರಂಗಳನ್ನು ಖರೀದಿಸುವ ದಿನಾಂಕ:**2.4.09 ರಿಂದ 6.4.09**
2. ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ:1**0.4.09**
   (ಸಾಧ್ಯವಾದಲ್ಲಿ ಅಂದೇ ಸಂಜೆ 16.30 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು)
   ಬಾಕಿ ಉಪವಿಧಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಎನ್.ಎಮ್. ಮನಗೂಳಿ

ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

WATER RESOURCES DEPARTMENT (MINOR IRRIGATION)

Office of the Executive Engineer, M.I. Division, Belgaum

INVITATION FOR TENDERS (IFT)

(As per Standard Tender Document KW-3)

IFT No.EE /MID/BGM/TND/JE/08-09/829, Date: 27th February 2009

The dates of the tender called for by this office for the below mentioned works vide IFT No.EE /MID/BGM/TND/AE &JE/08-09/419 Date:04.02.2009 are extended as below.

Sl. No.	Name of Work
1	2
1.	Raising of B.C.B across Ghataprabha River near Awaradi by 2M in Gokak Taluka, Belgaum Dist.

1	2
2.	Construction of B.C.B across Kallal halla between Ainapur-Shedbal road near Laxmi temple Tq. Athani Dist. Belgaum.
3.	Construction of Percolation Tank across Yallammana halla near Kottalagi Village Tq.Athani. Dist Belgaum
4.	Construction of Barrage Markandeya River near Hindalaga Village Tq.& Dist. Belgaum
5.	Improvement of M.I.Tank at Ghastolli in Khanapur Tq. Belgaum Dist.
6.	Improvements to M.I. Tank at Yallur Sy.No.1080 in Belgaum Tq. & Dist.
7.	Construction of BCB near Sagare Village in Khanapur Tq. Belgaum Dist.

1. Tender documents may be purchased from : 02.04.09 to 06.04.09

2. Date of Receipt of tender : 10.04.09 upto 16.00 hrs.

(The tender shall be opened (if possible) the next day @16.00 hrs.)

Remaining conditions remain unchanged.

N.M. MANAGOLI

P.R. 266 Executive Engineer, M.I. Division, Belgaum.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಸಣ್ಣ ನೀರಾವರಿ ವಿಭಾಗ ಬೆಳಗಾವಿ.

ಅವಧಿ ವಿಸ್ತರಣೆ

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂ–2ರ ಅನ್ವಯ ಗುತ್ತಿಗೆ ಆಹ್ವಾನ)

ಕ್ರ.ಸಂ.ಸನೀ.ವಿ.ಬೆಳಗಾವಿ/ಸ.ಇಂ/ಟೆಂಡರ್/2008–09/830, ದಿ: 27ನೇ ಫೆಬ್ರವರಿ 2009

ಈ ಕಾರ್ಯಾಲಯದ ಟೆಂಡರ್ ಪ್ರಕಟಣೆ ಸಂ.ಸನೀ.ವಿ.ಬೆಳಗಾವಿ/ಕಿ.ಇಂ/ಟೆಂಡರ್/2008–09/173 ದಿನಾಂಕ:15.01.09ರಲ್ಲಿ ಆಹ್ವಾನಿಸಲಾದ ಕೆಳಗಿನ ಕಾಮಗಾರಿಗಳ ಟೆಂಡರಿನ ದಿನಾಂಕಗಳನ್ನು ಈ ಕೆಳಗಿನಂತೆ ಮುಂದೂಡಲಾಗಿದೆ.

ಕ್ರಮ ಸಂ.	ಕೆಲಸದ ಹೆಸರು
1.	ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಖೋತನಟ್ಟಿ ಹತ್ತಿರ ಹೀರೇಹಳ್ಳಕ್ಕೆ ಅಡ್ಡಲಾಗಿ ಬಾಂಧಾರ ನಿರ್ಮಾಣ

1. ಖುಲ್ಲಾ ಟೆಂಡರ್ ಫಾರಂಗಳನ್ನು ಖರೀದಿಸುವ ದಿನಾಂಕ:**2.4.09 ರಿಂದ 6.4.09**
2. ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ:**10.4.09**

(ಸಾಧ್ಯವಾದಲ್ಲಿ ಅಂದೇ ಸಂಜೆ 16.30 ಗಂಟೆಗೆ ಟೆಂಡರ್‌ಗಳನ್ನು ತೆರೆಯಲಾಗುವುದು)

ಬಾಕಿ ಉಪವಿಧಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಎನ್.ಎಮ್. ಮನಗೂಳಿ

ಪಿ.ಆರ್. 267 ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ವಿಭಾಗ, ಬೆಳಗಾವಿ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ ಇವರ ಕಛೇರಿ

ಸಂಕ್ಷಿಪ್ತ ಬಹಿರಂಗ ಹರಾಜು ಪ್ರಕಟಣೆ

ಕ್ರ.ಎ2.ಬಿಜಿಟಿ.ಕಟ್ಟಡ.ಸಿಆರ್ 76/03–04, ದಿನಾಂಕ: 3ನೇ ಮಾರ್ಚ್ 2009

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಸಾಗರ ಅರಣ್ಯ ವಿಭಾಗದ ನಗರ ವಲಯ ವ್ಯಾಪ್ತಿಯ ಚಕ್ರಾ ನಗರದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ನಿಗಮ ನಿಯಮಿತ ಇವರಿಂದ ಕರ್ನಾಟಕ ಅರಣ್ಯ ಇಲಾಖೆಗೆ ಹಸ್ತಾಂತರಗೊಂಡಿರುವ ಹಳೆಯ ಮತ್ತು ಉಪಯೋಗಕ್ಕೆ ಬಾರದ ಕಟ್ಟಡಗಳಲ್ಲಿರುವ ಮರಮಟ್ಟು ಹಾಗೂ ಇತರೆ ಕಟ್ಟಡ ಸಾಮಗ್ರಿಗಳನ್ನು ಎಲ್ಲಿ ಹೇಗಿವೆಯೋ ಹಾಗೇ ದಿ:03.04.2009 ರಂದು ಬೆಳಿಗ್ಗೆ 10–00 ಗಂಟೆಗೆ ಹೊಸನಗರ ತಾಲ್ಲೂಕು (ನಗರ ವಲಯ) ಕೆಪಿಸಿಯ ಹಿಂದಿನ ಚಕ್ರಾ ನಗರ ಕಾಲೋನಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ ಇವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಕೆಳಕಾಣಿಸಿದ ಷರತ್ತುಗಳ ಅನ್ವಯ ಬಹಿರಂಗ ಹರಾಜು ನಡೆಸುವರು.

ತಪಶೀಲು

ಕ್ರ. ಸಂ.	ಲಾಟ್ ಸಂಖ್ಯೆ	ವಲಯದ ಹೆಸರು	ಸ್ಥಳ	ಅಂದಾಜು ಪ್ರಮಾಣ	ಹರಾಜು ದಿನಾಂಕ ಮತ್ತು ಸಮಯ	ಮುಂಗಡ ಠೇವಣಿ (ರೂ)
1	1 ರಿಂದ 244	ನಗರ	ಚಕ್ರಾ ನಗರ ಕಾಲೋನಿ ಹೊಸನಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ	ಪ್ರತಿ ಕಟ್ಟಡದಲ್ಲಿರುವ ಕಟ್ಟಡ ಸಾಮಗ್ರಿಗಳು ಪ್ರತಿ ಕಟ್ಟಡಕ್ಕೆ ಪ್ರತ್ಯೇಕವಾಗಿ	3.4.09	5000–00

ಷರತ್ತುಗಳು:

1. ಪ್ರತಿ ಕಟ್ಟಡದಲ್ಲಿರುವ ಸಾಮಗ್ರಿಗಳನ್ನು ಪ್ರತ್ಯೇಕ ಲಾಟನ್ನಾಗಿ ಪರಿಗಣಿಸಿ ಎಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವ ಪ್ರತಿಯೊಬ್ಬರು ರೂ.5000/– ಮುಂಗಡ ಠೇವಣಿಯನ್ನು ಪಾವತಿಸಿ ರಶೀದಿಯನ್ನು ಪಡೆದಿರತಕ್ಕದ್ದು.
3. ಬಹಿರಂಗ ಹರಾಜು ಮುಕ್ತಾಯವಾದ ನಂತರ ಹರಾಜಿನಲ್ಲಿ ಖರೀದಿಸಿದ ಲಾಟುಗಳ ಒಟ್ಟು ಮೊತ್ತದ 1/4 ಭಾಗದ ಹಣ ಮತ್ತು ಚಾಲ್ತಿಯಲ್ಲಿರುವ ಸಂಬಂಧಪಟ್ಟ ತೆರಿಗೆಗಳನ್ನು ಅದೇ ದಿನ ಪಾವತಿಸತಕ್ಕದ್ದು. ತಪ್ಪಿದಲ್ಲಿ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಂತಹ ಲಾಟುಗಳನ್ನು ತಪ್ಪಿತಸ್ಥ ಲಾಟುಗಳೆಂದು ಘೋಷಿಸಿ ಮರು ಹರಾಜು ಮಾಡಲಾಗುವುದು. ಉಳಿದ 3/4 ಭಾಗದ ಮೌಲ್ಯವನ್ನು ಹರಾಜು ದಿವಸದಿಂದ 5 ದಿನಗಳ ಒಳಗಾಗಿ ಪಾವತಿಸಿ ಹರಾಜಿನಲ್ಲಿ ಖರೀದಿಸಿರುವ ಲಾಟುಗಳನ್ನು ತಮ್ಮ ವಶಕ್ಕೆ ಪಡೆಯತಕ್ಕದ್ದು.
4. ಹರಾಜಿನಲ್ಲಿ ಭಾಗವಹಿಸುವ ಪ್ರತಿ ಬಿಡ್ಡುದಾರರು ಸಹ ಸವಿಸ್ತಾರ ಹರಾಜು ಪ್ರಕಟಣೆಯನ್ನು ಓದಿ, ಒಪ್ಪಿ ಸಹಿ ಮಾಡತಕ್ಕದ್ದು. ಸವಿಸ್ತಾರ ಹರಾಜು ಪ್ರಕಟಣೆಗೆ ಸಹಿ ಮಾಡದ ಮತ್ತು ಒಪ್ಪದ ಬಿಡ್ಡುದಾರರಿಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.
5. ಹರಾಜಿನಲ್ಲಿ ಬಿಡ್ಡುದಾರರ ಸವಾಲನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಹರಾಜು ನಿರ್ವಹಿಸುವ ಅಧಿಕಾರಿ ಕಾಯ್ದಿರಿಸಿಕೊಂಡಿರುತ್ತಾರೆ.
6. ಅನಿವಾರ್ಯ ಕಾರಣಗಳಿಂದಾಗಿ ಹರಾಜನ್ನು – ಮೂಂದೂಡುವ/ರದ್ದುಪಡಿಸುವ/ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
7. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಪಿ.ಆರ್. 275 ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಜಿಲ್ಲಾ ನೋಂದಣಾಧಿಕಾರಿಗಳು, ಹಾಸನ ಇವರ ನಡವಳಿಗಳು

ವಿಷಯ: ಹಾಸನ ಜಿಲ್ಲೆಯಲ್ಲಿನ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕಗೊಂಡ ಶ್ರೀ ಪಿ.ಯಶವಂತ S/o ಚಂದು, ಬೆರಳಚ್ಚುಗಾರರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೀದರ್ ಇವರ ನೇಮಕಾತಿ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ:

1. ಸರ್ಕಾರದ ಅಧಿಸೂಚನೆ ಸಂಖ್ಯೆ DPAR 13 SBC 2001 ದಿನಾಂಕ 21.11.2001 ರನ್ವಯ ಪ್ರಕಟಿಸಿರುವ ಕೆ.ಸಿ.ಎಸ್. (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟು ತುಂಬದೇ ಇರುವ ಹುದ್ದೆಗಳ) ವಿಶೇಷ ನೇಮಕಾತಿ ನಿಯಮಗಳು 2001.
2. ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರ ರೀ–ಅಲಾಟ್‌ಮೆಂಟ್ ಆದೇಶ ಸಂಖ್ಯೆ EST 1-274/01-02 ದಿನಾಂಕ: 07.10.2008.
3. ಈ ಕಛೇರಿಯ ನೇಮಕಾತಿ ಆದೇಶ ಸಂಖ್ಯೆ: EST 168/2008-09 ದಿನಾಂಕ: 23.10.2008

ಪ್ರಸ್ತಾವನೆ:

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರು ಉಲ್ಲೇಖ (2) ರ ಅವರ ರೀ–ಅಲಾಟ್‌ಮೆಂಟ್ ಆರ್ಡರ್‌ನಲ್ಲಿ ಕೆಳಕಂಡ ಅಭ್ಯರ್ಥಿಯನ್ನು ಈ ಜಿಲ್ಲೆಯಲ್ಲಿ ಗುರುತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಬೆರಳಚ್ಚುಗಾರರೆಂದು ನೇಮಕಾತಿ ಮಾಡಿಕೊಳ್ಳುವುದಕ್ಕಾಗಿ, ಅಲಾಟ್ ಮಾಡಿದ್ದರ ಮೇರೆ, ಕೆಳಕಂಡ ಅಭ್ಯರ್ಥಿಯನ್ನು ಉಲ್ಲೇಖ (3)ರ ಈ ಕಛೇರಿಯ ಆದೇಶದಲ್ಲಿ ಬೆರಳಚ್ಚುಗಾರರೆಂದು ನೇಮಕ ಮಾಡಿ ಅದೇ ಆದೇಶದಲ್ಲಿ ಕೆಳಕಂಡ ಅಭ್ಯರ್ಥಿಯನ್ನು ಅವರ ಹೆಸರಿನ ಮುಂದೆ ಸೂಚಿಸಿದ ಕಛೇರಿಗೆ ಸ್ಥಳ ನಿಯುಕ್ತಿ ಮಾಡಿ ಸದರಿ ನೇಮಕಾತಿ ಆದೇಶವು ಮುಟ್ಟಿದ ದಿನಾಂಕದಿಂದ ಹದಿನೈದು (15) ದಿನಗಳೊಳಗೆ ನೇಮಕಾತಿ ಮಾಡಿದ ಕಛೇರಿಯಲ್ಲಿ ತಪ್ಪದೇ ಕೆಲಸಕ್ಕೆ ಹಾಜರಾಗುವಂತೆ ಸದರಿ ಅಭ್ಯರ್ಥಿಗೆ ಸೂಚಿಸಿ, ಉಲ್ಲೇಖ (3) ಸದರಿ ನೇಮಕಾತಿ ಆದೇಶವನ್ನು RPAD ಮೂಲಕ ಅಭ್ಯರ್ಥಿಗೆ ಕಳುಹಿಸಲಾಗಿತ್ತು.

ಕ್ರ. ಸಂ.	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	SC/ST	ಅಭ್ಯರ್ಥಿಯನ್ನು ಬೆರಳ್ಚುಗಾರರೆಂದು ನೇಮಕ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ	ವರ್ಗೀಕರಣ
1.	ಶ್ರೀ ಪಿ. ಯಶವಂತ S/o ಚಂದು, ಬೆರಳಚ್ಚುಗಾರರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ, ನ್ಯಾಯಾಲಯ, ಬೀದರ್	SC	ಜಿಲ್ಲಾ ನೋಂದಣಿ ಕಛೇರಿ, ಹಾಸನ	ಪರಿಶಿಷ್ಟ ಜಾತಿ ಸಾಮಾನ್ಯ ಅರ್ಹತಾ ಅಭ್ಯರ್ಥಿ ಹೆಚ್ಚುವರಿ ಪಟ್ಟಿ

ಮೇಲ್ಕಂಡ ಅಭ್ಯರ್ಥಿಯು ಈ ಕಛೇರಿಯ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ದಿನಾಂಕ: 25.10.2008ರಲ್ಲಿ ಪಡೆದಿದ್ದರೂ ಸಹ ಸದರಿಯವರು ಅವರನ್ನು ನೇಮಕ ಮಾಡಿದ ಕಛೇರಿಯಲ್ಲಿ ಈ ತಹಲ್‌ವರೆವಿಗೂ ಕೆಲಸಕ್ಕೆ ಹಾಜರಾಗಿರುವುದಿಲ್ಲ. ಕೆಲಸಕ್ಕೆ ಹಾಜರಾಗಲು ಇವರಿಗೆ ನೀಡಿದ ಹದಿನೈದು ದಿನಗಳ ಕಾಲಾವಕಾಶವು ಈಗಾಗಲೇ ಮುಕ್ತಾಯವಾಗಿರುತ್ತದೆ. ಉಲ್ಲೇಖ (3)ರ ಈ ಕಛೇರಿಯ ನೇಮಕಾತಿ ಆದೇಶವನ್ನು ಸ್ವೀಕರಿಸಿದ ನಂತರವೂ ಕೆಲಸಕ್ಕೆ ಹಾಜರಾಗಲು ನೀಡಿದ ಹದಿನೈದು ದಿನಗಳ ಕಾಲಾವಕಾಶಕ್ಕಿಂತ ಇನ್ನೂ ಹೆಚ್ಚಿನ ಕಾಲಾವಕಾಶ ನೀಡಬೇಕೆಂದು ಈ ಅಭ್ಯರ್ಥಿಯು ಯಾವುದೇ ರೀತಿಯ ಕೋರಿಕೆಯನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಅಭ್ಯರ್ಥಿಯ ನೇಮಕಾತಿಯನ್ನು ರದ್ದುಪಡಿಸುವುದು ಸೂಕ್ತವೆಂದು ಮನಗಂಡು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಸಿಬ್ಬಂದಿ : 256:08–09, ದಿನಾಂಕ: 2ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (1)ರ ಅಧಿಸೂಚನೆ ಅನ್ವಯ ಹಾಗೂ 1977ರ ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) ನಿಯಮಗಳಲ್ಲಿನ 18 (3)ನೇ ನಿಯಮದನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಮೇಲ್ಕಂಡ ಅಭ್ಯರ್ಥಿಯಾದ ಶ್ರೀ ಪಿ. ಯಶವಂತ S/o ಚಂದು, ಬೆರಳಚ್ಚುಗಾರರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಬೀದರ್ ಇವರನ್ನು ಈ ಇಲಾಖೆಯಲ್ಲಿನ ಈ ಜಿಲ್ಲೆಯ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಬೆರಳಚ್ಚುಗಾರರೆಂದು ನೇಮಕ ಮಾಡಿದ ಈ ಕಛೇರಿಯ ಉಲ್ಲೇಖ (3)ರ ನೇಮಕಾತಿ ಆದೇಶವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಮೇಲ್ಕಂಡ ಅಭ್ಯರ್ಥಿಯು ಈ ತಕ್ಷಣದಿಂದ ಈ ಇಲಾಖೆಯಲ್ಲಿನ ಈ ಜಿಲ್ಲೆಯ ಬೆರಳಚ್ಚುಗಾರರ ಹುದ್ದೆಯ ನೇಮಕಾತಿ ಹಕ್ಕನ್ನು ಕಳೆದುಕೊಂಡಿರುವರೆಂದು ಹಾಗೂ ಬೆರಳಚ್ಚುಗಾರರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಹೊಂದಿರತಕ್ಕದ್ದಲ್ಲವೆಂದು ಹಾಗೂ ಸದರಿಯವರು ಬೆರಳಚ್ಚುಗಾರರ ಹುದ್ದೆಯ ಮೇಲೆ ಯಾವುದೇ ಹಕ್ಕನ್ನು ಸಾಧಿಸತಕ್ಕದ್ದಲ್ಲವೆಂದು ಈ ಮೂಲಕ ಆದೇಶಿಸಿದೆ.

ನೇಮಕಾತಿ ಪ್ರಾಧಿಕಾರಿ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳು,

ಪಿ.ಆರ್. 269 ಹಾಸನ ಜಿಲ್ಲೆ, ಹಾಸನ.

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, ''ಉದ್ಯೋಗ ಸೌಧ'', ಬೆಂಗಳೂರು

ತಿದ್ದುಪಡಿ

ಸಂಖ್ಯೆ: ಇಪ(2)1464/2008–09/ಪಿಎಸ್‌ಸಿ, ಬೆಂಗಳೂರು, ದಿನಾಂಕ: 26ನೇ ಫೆಬ್ರವರಿ 2009

ಆಯೋಗದ ಅಧಿಸೂಚನೆ ಸಂಖ್ಯೆ:ಇಪ(1)1186/2008–09/ಪಿಎಸ್‌ಸಿ ದಿನಾಂಕ: 28.10.2008 ರಲ್ಲಿ, 2008ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷಾ ಫಲಿತಾಂಶವನ್ನು ದಿನಾಂಕ:06.11.2008ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದ್ದು, 'ಬೆಂಗಳೂರು' ಕೇಂದ್ರಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಸೇರಿಸಿ ಓದಿಕೊಳ್ಳುವುದು:–

''ಅಪೆಂಡಿಕ್ಸ್ – 'ಎ'

ಬೆಂಗಳೂರು ಕೇಂದ್ರ

ವಿಷಯ	ನೋಂದಣಿ ಸಂಖ್ಯೆ	ದರ್ಜೆ
ಟ್ರೆಜರಿ ಅಕೌಂಟ್ಸ್ ಭಾಗ–1	11763	ಸಾಮಾನ್ಯ
ಪಿ.ಡಬ್ಲ್ಯೂಡಿ ಹೈಯರ್ ಭಾಗ–1	15600	ಸಾಮಾನ್ಯ
ಎಸ್.ಎ.ಎಸ್.ಭಾಗ–1	17628	ಸಾಮಾನ್ಯ
ಎಸ್.ಎ.ಎಸ್.ಭಾಗ–1	17750	ಸಾಮಾನ್ಯ

ಅಪೆಂಡಿಕ್ಸ್ 'ಬಿ'

ಬೆಂಗಳೂರು ಕೇಂದ್ರ

ಎಸ್ ಎ ಎಸ್ ಭಾಗ–3ರ ಪತ್ರಿಕೆ–2 ರಿಂದ 5ರವರೆಗೆ ತೇರ್ಗಡೆ ಹೊಂದಿರುವ ನೋಂದಣಿ ಸಂಖ್ಯೆ 12875

ವಿ.ಬಿ. ಪಾಟೀಲ್

ಪಿ.ಆರ್. 222 ಕಾರ್ಯದರ್ಶಿ, ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,

ಕರ್ನಾಟಕ ಲೋಕಸೇವಾ ಆಯೋಗ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಟೆಂಡರ್ ಪ್ರಕಟಣೆ

ಸಂಖ್ಯೆ: ಸಿಆಸುಇ 02 ಡಿಟಿಎಂ 2008, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2009

ಕರ್ನಾಟಕ ಸರ್ಕಾರ ಸಚಿವಾಲಯದ ಉಪಯೋಗಕ್ಕಾಗಿ ನೂತನ ಮಾದರಿಯ (Latest Model) ಫ್ರಾಂಕಿಂಗ್ ಯಂತ್ರವನ್ನು ಖರೀದಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ತಯಾರಕರು ಅಥವಾ ಅವರ ಅಧಿಕೃತ ಮಾರಾಟಗಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದೆ. ಅಧಿಕೃತ ಮಾರಾಟಗಾರರ ಬಗ್ಗೆ ದೃಢೀಕರಣ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿರಬೇಕು.

ಇಚ್ಛೆಯುಳ್ಳ ತಯಾರಕರು ಅಥವಾ ಅವರ ಮಾರಾಟಗಾರರು / ವಿತರಕರು Under Secretary to Government, Department of Personnel & Administrative Reforms (Accounts), Room No.25, Vidhanasoudha, Bangalore ಇಲ್ಲಿ ರೂ.100.00 + ಶೇಕಡ 12.5 ರಂತೆ ಮಾರಾಟ ತೆರಿಗೆ, ಅಂದರೆ ರೂ.114/– (ರೂಪಾಯಿ ನೂರ ಹದಿನಾಲ್ಕು ಮಾತ್ರ)ಗಳನ್ನು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಸಲ್ಲಿಸಿ ನಂತರ ಟೆಂಡರ್ ನಮೂನೆಯನ್ನು Under Secretary to Government, Department of Personnel & Administrative Reforms (Executive), Room No.23, Vidhanasoudha, ಇಲ್ಲಿ ಪಡೆದುಕೊಳ್ಳಬಹುದು. **ದಿನಾಂಕ 04/04/2009** ರಂದು ಮಧ್ಯಾಹ್ನ 4:30 ಘಂಟೆಯವರೆಗೆ ಟೆಂಡರ್ ಅರ್ಜಿಗಳನ್ನು ನೀಡಲಾಗುವುದು. ಈ ಟೆಂಡರ್ ನಮೂನೆಗೆ ನೀಡಿದ ಮೊತ್ತವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 15/04/2009** ರಂದು ಮಧ್ಯಾಹ್ನ 4:30 ಘಂಟೆವರೆಗೆ, ತದನಂತರ ಬಂದ ಟೆಂಡರ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಟೆಂಡರ್‌ಗಳನ್ನು ಟೆಂಡರ್ ಬುಲೆಟಿನ್ ಅಧಿಕಾರಿಯವರು ಕೊಠಡಿ ಸಂಖ್ಯೆ: 23, ವಿಧಾನಸೌಧ, ಬೆಂಗಳೂರು – 560 001 ಇಲ್ಲಿ ಟೆಂಡರ್‌ದಾರರ ಸಮ್ಮುಖದಲ್ಲಿ **ದಿನಾಂಕ 16/04/2009** ರಂದು ಮಧ್ಯಾಹ್ನ 4:30 ಘಂಟೆಗೆ ತೆರೆಯಲಾಗುವುದು. ಟೆಂಡರ್ ತೆರೆಯುವ ದಿನಾಂಕವು ಯಾವುದಾದರೂ ಸಾರ್ವತ್ರಿಕ ರಜೆ ದಿನವಾದಲ್ಲಿ ಮಾರನೆಯ ಕೆಲಸದ ದಿನ ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ ತೆರೆಯಲಾಗುವುದು.

1. ಟೆಂಡರ್ ಅರ್ಜಿಗಳನ್ನು ಈ ಕಛೇರಿಯಿಂದಲೇ ಖರೀದಿಸಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು.
2. ಮೊಹರಾದ ಟೆಂಡರ್ ಲಕೋಟೆಯ ಮೇಲೆ "ಫ್ರಾಂಕಿಂಗ್ ಯಂತ್ರಗಳ ದರಪಟ್ಟಿ" ಎಂದು ಬರೆಯತಕ್ಕದ್ದು.
3. ಟೆಂಡರ್‌ದಾರರು ಸಾಮಗ್ರಿ ಅಥವಾ ಅವರು ಸರಬರಾಜು ಮಾಡುವ ಸಾಮಗ್ರಿ ಮಾತ್ರ ಸೀಮಿತಗೊಳಿಸಿ ದರಗಳನ್ನು ನಮೂದಿಸತಕ್ಕದ್ದು.
4. ಟೆಂಡರ್‌ದಾರರು ಸೂಚಿಸಿದ ದರಕ್ಕೆ ತೆರಿಗೆಗಳಿದ್ದಲ್ಲಿ ಪ್ರತ್ಯೇಕವಾಗಿ ನಮೂದಿಸಬೇಕು.
5. ಮುಂಗಡ ಠೇವಣಿ (ಇ.ಎಂ.ಡಿ) ಮೊತ್ತ ರೂ.5000/– ಗಳ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು **Under Secretary to Government, Department of Personnel & Administrative Reforms (Accounts), Vidhanasoudha, Bangalore**, ಇವರ ಹೆಸರಿನಲ್ಲಿ ಸಲ್ಲಿಸತಕ್ಕದ್ದು, ಮೂಲ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸಿರದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ದರಪಟ್ಟಿಯೊಂದಿಗೆ ಜನವರಿ 2009ರ ಅಂತ್ಯದವರೆಗೆ ಮೌಲ್ಯವರ್ಧಿತ ತೆರಿಗೆ ಸಲ್ಲಿಸಿದ ಬಗ್ಗೆ ದಾಖಲೆ ಸಲ್ಲಿಸತಕ್ಕದ್ದು.
7. ದರಪಟ್ಟಿಯೊಂದಿಗೆ ಕಳೆದ ಸಾಲಿನಲ್ಲಿ ಪಾವತಿಸಿದ ಆದಾಯ ತೆರಿಗೆ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.
8. ನಮೂದಿಸುವ ದರವು ಸಾಗಾಣಿಕೆ ವೆಚ್ಚ ಇತ್ಯಾದಿಗಳನ್ನು ಒಳಗೊಂಡಿರಬೇಕು.
9. ಟೆಂಡರ್‌ನ್ನು ಅನುಮೋದಿಸಿದಲ್ಲಿ ಟೆಂಡರ್‌ದಾರರು ಗೊತ್ತು ಪಡಿಸಿರುವ ದರದಲ್ಲಿಯೇ, ಸಾಮಗ್ರಿಯನ್ನು ಒದಗಿಸಲು ಬದ್ಧರಿರಬೇಕು.
10. ಒದಗಿಸುವ ಸಾಮಗ್ರಿಗಳು ದೋಷದಿಂದ ಕೂಡಿದ್ದಲ್ಲಿ ಕೂಡಲೇ ಬದಲಾಯಿಸಿ ಕೊಡಲು ಬದ್ಧರಿರಬೇಕು, ಇಲ್ಲದಿದ್ದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು.
11. ಸಾಮಗ್ರಿಗಳನ್ನು ಒದಗಿಸುವಂತೆ ಪತ್ರ ಬರೆದ 10 (ಹತ್ತು) ದಿನಗಳೊಳಗಾಗಿ ಒದಗಿಸಲು ಬದ್ಧರಿರಬೇಕು.
12. ಯಶಸ್ವಿ ಟೆಂಡರ್‌ದಾರ ಇ.ಎಂ.ಡಿಯನ್ನು, ಸಾಮಗ್ರಿ ಸರಬರಾಜು ಮಾಡಿದ ನಂತರ ಷರತ್ತುಗಳ ಉಲ್ಲಂಘನೆ ಆಗಿರದಿದ್ದಲ್ಲಿ ಮಾತ್ರ ವಾಪಸ್ಸು ಮಾಡಲಾಗುವುದು. ಇದಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ.
13. ಮೇಲಿನ ಅಂಶಗಳ ಬಗ್ಗೆ ಪೂರ್ಣ ವಿವರ ನೀಡತಕ್ಕದ್ದು, ಅಪೂರ್ಣ ಇರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
14. ಯಾವುದೇ ಕಾರಣವನ್ನು ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಟೆಂಡರ್ ಅಂಗೀಕರಿಸುವ ಸಕ್ಷಮ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ. ಇವರ ನಿರ್ಣಯವೇ ಅಂತಿಮವಾದದ್ದು.

ಇನ್ನು ಹೆಚ್ಚಿನ ವಿವರಗಳಿಗೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ), ಇವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 22033440 ಅಥವಾ 22033971 ರಲ್ಲಿ ಸಂಪರ್ಕಿಸಬಹುದು.

ಕೆ.ಎಸ್. ಮಂಜುನಾಥ್
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಅನುಬಂಧ

ಟೆಂಡರ್ ಪ್ರಕಟಣೆ ಸಂಖ್ಯೆ:

ಕಾಪಿಯರ್ ಯಂತ್ರಗಳ ಬಳಕೆ ಪದಾರ್ಥಗಳ ದರ

ಸಿಆಸುಇ 02 ಡಿಟಿಎಂ 2008

ಕ್ರಮ ಸಂಖ್ಯೆ	**ಸಾಮಗ್ರಿಗಳ ವಿವರ**	**ದರ ಒಂದಕ್ಕೆ**	**ತೆರಿಗೆ**
1	Franking Machine (Latest Model)		

ಟೆಂಡರ್‌ದಾರರ ಸಹಿ
(ಪೂರ್ಣ ಹೆಸರು ವಿಳಾಸ ಮೊಹರಿನೊಂದಿಗೆ)

ಕೆ.ಎಸ್. ಮಂಜುನಾಥ್
ಪಿ.ಆರ್. 283
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)

ಸಹಕಾರ ಇಲಾಖೆ

ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ ಕಛೇರಿ, ಕೊಠಡಿ ಸಂಖ್ಯೆ: 621, 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು

ಸಂಕ್ಷಿಪ್ತ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸಂಖ್ಯೆ: ಸಇ 64 ಎಂಆರ್‌ಇ 2009, ದಿನಾಂಕ: 28ನೇ ಫೆಬ್ರವರಿ 2009

ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅನುದಾನದಲ್ಲಿ ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯ ಕಾರಟಗಿ ಮತ್ತು ಸಿದ್ದಾಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸುಸಜ್ಜಿತ ಆಡಳಿತ ಕಛೇರಿ ಕಟ್ಟಡ ಮತ್ತು ಸಮುದಾಯ ಭವನಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಪ್ರಥಮ ದರ್ಜೆ ಗುತ್ತಿಗೆದಾರರಿಂದ ಇಲೆಕ್ಟ್ರಾನಿಕ್ ಟೆಂಡರ್ ಪದ್ಧತಿಯಲ್ಲಿ ಹಾಗೂ 2 ಲಕೋಟೆ ಪದ್ಧತಿಯಲ್ಲಿ ದ್ವಿಪ್ರತಿಗಳಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರ್ ಮೊಬಲಗು (ಅಂದಾಜು) (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊಬಲಗು (ರೂ.ಲಕ್ಷಗಳಲ್ಲಿ)	ಎಪಿಎಂಸಿ ಟೆಂಡರ್ ಪ್ರೊಸೆಸಿಂಗ್ ಫೀ (ರೂ.ಗಳಲ್ಲಿ)	ಕೆಲಸ ಪೂರೈಸಲು ನಿಗದಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ)	ಅರ್ಹ ಗುತ್ತಿಗೆದಾರರ ದರ್ಜೆ
1	ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯ ಕಾರಟಗಿ ಉಪ ಮರುಕಟ್ಟೆ ಪ್ರಾಂಗಣದಲ್ಲಿ ಸುಸಜ್ಜಿತ ಆಡಳಿತ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ.	123.00	2.00	13,000.00	6 ತಿಂಗಳು	1ನೇ ದರ್ಜೆ
2.	ಗಂಗಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯ ಸಿದ್ದಾಪುರ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಸಮುದಾಯ ಭವನವನ್ನು ನಿರ್ಮಿಸುವ ಕಟ್ಟಡ ಕಾಮಗಾರಿ.	186.00	2.80	20,000.00	6 ತಿಂಗಳು	1ನೇ ದರ್ಜೆ

1. ಖಾಲಿ ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ : 02/03/2009 ಸಂಜೆ 3.30 ಗಂಟೆಗೆ
2. ಪ್ರೀ ಬಿಡ್ ಮೀಟಿಂಗ್ ವಿವರಗಳು : 29/04/2009 ಸಂಜೆ 4.30 ಗಂಟೆವರೆಗೆ
3. ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30/04/2009 ಸಂಜೆ 4.30 ಗಂಟೆವರೆಗೆ

4. ಟೆಂಡರ್ ತಕರಾರು ಸಮಜಾಯಿಷಿ ದಿನಾಂಕ : 30/04/2009 ಮಧ್ಯಾಹ್ನ 12.00 ಗಂಟೆವರೆಗೆ
5. ಭರ್ತಿಮಾಡಿದ ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 02/05/2009 ಸಂಜೆ 4.30 ಗಂಟೆಗೆ
6. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 06/05/2009 ಬೆಳಿಗ್ಗೆ 11.00 ಗಂಟೆಗೆ
7. ಆರ್ಥಿಕ ಬಿಡ್ ತೆರೆಯುವ ದಿನಾಂಕ : 13/05/2009 ಸಂಜೆ 4.00 ಗಂಟೆಗೆ

★ ಎ.ಪಿ.ಎಂ.ಸಿ. ಟೆಂಡರ್ ಫಾರಂ ಫೀ ಮೊತ್ತವನ್ನು ನಗದು ಅಥವಾ ಡಿ.ಡಿ. ಮೂಲಕ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗಂಗಾವತಿ ಇವರ ಹೆಸರಿನಲ್ಲಿ ನೀಡುವುದು.

★ ಇ.ಎಂ.ಡಿ ಮೊತ್ತಗಳನ್ನು ಪ್ರತ್ಯೇಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಎಕ್ಸಿಸ್ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರ್ಕಾರದ ಸೆಂಟ್ರಲ್ ಪೂಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕ್ಯೂಮೆಂಟಿನಲ್ಲಿ ತಿಳಿಸಿರುವ ಯಾವುದಾದರೂ ಒಂದು ಮಾದರಿಯಲ್ಲಿ ಸಂದಾಯ ಮಾಡುವುದು.

★ ಮೇಲ್ಕಂಡ ದಿನಾಂಕಗಳಲ್ಲಿ ಸರ್ಕಾರಿ ರಜೆ ದಿನಗಳಾದಲ್ಲಿ ಮುಂದಿನ ದಿನವನ್ನು ಪರಿಗಣಿಸತಕ್ಕದ್ದು.

★ ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in ಈ ವೆಬ್‌ಸೈಟ್‌ನಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆಯಬಹುದು.

ಈ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದರೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಟೆಂಡರ್‌ಗೆ ಸಂಬಂಧಿಸಿದಂತೆ, ಸಾಮಾನ್ಯ ಷರತ್ತುಗಳು (ಅರ್ಹತಾ ಷರತ್ತುಗಳು) ಮತ್ತು ನಿಬಂಧನೆಗಳನ್ನು ಟೆಂಡರ್ ಫಾರಂನೊಂದಿಗೆ ಪಡೆಯಬಹುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪ್ರಕರಣ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲೆ ಹೇಳಿದ ಟೆಂಡರ್‌ನ ವಿವರಗಳನ್ನು ಪ್ರಕಟಿಸಲಾಗಿದೆ.

ಫೈರೋಜಾ ಖಾನಂ

ಪಿ.ಆರ್. 276 ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ನಮೂನೆ – 1

[9ನೇ ನಿಯಮ ನೋಡಿ]

ಶಿಕ್ಷಣ ಇಲಾಖೆ

ಅಧಿಸೂಚನೆ

ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಉಪ ನಿರ್ದೇಶಕರ ಕಛೇರಿಯಲ್ಲಿ ಗ್ರೂಪ್ 'ಡಿ' ಆಗಿ ಕೆಲಸ ಮಾಡುತ್ತಿರುವ **ಶ್ರೀಮತಿ ರೇಣುಕಾ ಹನುಮಪ್ಪಾ ಮಾದರ** ಇವರ ಹೆಸರನ್ನು **ರೇಣುಕಾ ಹನುಮಪ್ಪಾ ಜಕನೂರ** ಎಂದು ಹೆಸರು ಬದಲಾವಣೆಗೆ ಅನುಮತಿ ನೀಡಲಾಗಿದೆ.

ಪಿ.ಡಿ. 43 ಉಪ ನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.

FORM - IV

(See Rule 12)

NOTICE

It is hereby notified that the undersigned has changed his/her name from **I.M. KENECHAIAH** to **I.M. KRISHNA KUMAR**

P.D. 44 **I.M. KENECHAIAH**

FORM - I

(See Rule 9)

EDUCATION DEPARTMENT

Office of the Deputy Director of Public Instruction, Haveri

NOTIFICATION

Shri **MAHABOOBSAB PEERASAB PINJAR** Working as ASSISTANT TEACHER, in the Education Department of / SCHOOL OF GOVT HIGH SCHOOL, Itagi, Tq/Ranebennur Dist : Haveri is permitted to change his surname to **MAHABOOBSAB PEERASAB ERESIMI**

P.D. 45 Deputy Director of Public Instruction, Haveri

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಛೇರಿ, ಸರ್ಕಾರಿ ಕೇಂದ್ರ ಮುದ್ರಣಾಲಯ,
ಆರ್.ವಿ. ಕಾಲೇಜ್ ಅಂಚೆ, 8ನೇ ಮೈಲಿ, ಮೈಸೂರು ರಸ್ತೆ, ಬೆಂಗಳೂರು – 560 059
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಪತ್ರ ಸಂಖ್ಯೆ: ಡಿಪಿಎಸ್/ಪಿಯುಆರ್/ಬಿ–72/2008–09, ದಿನಾಂಕ: 9ನೇ ಮಾರ್ಚ್ 2009

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರ ನಿಯಮಗಳಡಿ ಫೋಟೋ ಕಾಪಿಯರ್ ಯಂತ್ರಗಳು, ಲೇಸರ್ ಪ್ರಿಂಟರ್‌ಗಳು, ಇಂಕ್‌ಜೆಟ್ ಪ್ರಿಂಟರ್‌ಗಳು, ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್, ಇತ್ಯಾದಿಗಳಲ್ಲಿ ಬಳಸುವ ಸಾಮಗ್ರಿಗಳನ್ನು ವಾರ್ಷಿಕ ದರ ಗುತ್ತಿಗೆಯ ಆಧಾರದಲ್ಲಿ ಸರಬರಾಜು ಮಾಡಲು ಅರ್ಹ ಮತ್ತು ಅಧಿಕೃತ ಡೀಲರ್‌ಗಳು / ಹಂಚಿಕೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಾಮಗ್ರಿಗಳ ಅಂದಾಜು ಪ್ರಮಾಣ ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇರಬೇಕಾದ ಅರ್ಹತೆಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ.80.0 ಲಕ್ಷ. ಇ.ಎಂ.ಡಿ. ಮೊತ್ತ ರೂ. 1.6 ಲಕ್ಷ ಟೆಂಡರ್ ದಸ್ತಾವೇಜುಗಳನ್ನು ರೂ. 500/– + ವ್ಯಾಟ್ ರೂ. 63/– ಗಳನ್ನು ನಗದಾಗಿ ಮೇಲ್ಕಂಡ ಕಛೇರಿಯಲ್ಲಿ ಪಾವತಿಸಿ ದಿನಾಂಕ: 06.04.2009ರ ಸಾಯಂಕಾಲ 4.30 ರವರೆಗೆ ಪಡೆಯಬಹುದಾಗಿದೆ. ಭರ್ತಿ ಮಾಡಿದ ಕವರ್–1 (ತಾಂತ್ರಿಕ ಬಿಡ್) ಮತ್ತು ಕವರ್–2 (ಆರ್ಥಿಕ ಬಿಡ್) ಗಳನ್ನೊಳಗೊಂಡ ಟೆಂಡರನ್ನು ದಿನಾಂಕ: 08.04.2009 ರಂದು ಮಧ್ಯಾಹ್ನ 3.00 ಗಂಟೆಯೊಳಗೆ ಈ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಬೇಕು. ಕವರ್–1ನ್ನು ಅದೇ ದಿನ ಮಧ್ಯಾಹ್ನ 3.30 ಗಂಟೆಗೆ ತೆರೆಯಲಾಗುವುದು. ಕವರ್–2ನ್ನು ದಿನಾಂಕ: 09.04.2009 ರಂದು ಮಧ್ಯಾಹ್ನ 3.30 ಗಂಟೆಗೆ ಅಥವಾ ನಂತರ ತಿಳಿಸುವ ದಿನಾಂಕದಂದು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ನಿರ್ದೇಶಕರು

OFFICE OF THE DIRECTOR OF PRINTING, STATIONERY & PUBLICATIONS,
Government Central Press, R.V. College Post, 8th Mile, Mysore Road, Bangalore – 5600059
BRIEF TENDER NOTIFICATION
No. DPS/PUR/B-72/2008-09, Dated: 9th March 2009

Sealed Tenders are invited in two covers system in accordance with KTPP Act 1999 and rules made thereunder for the supply of consumables for Photo copying machines, Lazer Printers, Inkjet Printers, Dot Matrix Printers, etc., from the eligible and Authorised Dealers/Distributors on Annual rate Contract basis. The details of approximate quantity and conditions of eligibility to participate in this Tender are provided in the Tender Document. The estimated value of Tender is Rs.80.0 lakhs. The EMD prescribed is Rs.1.6 lakhs. The Tender Documents can be obtained from the above Office by paying Rs.500/- + VAT Rs.63/- in cash on or before 06.04.2009 at 4.30 p.m. The duly filled up Tenders constituted with Cover – I (Technical Bid) and cover – II (Financial Bid) shall reach this Office on or before 3.00 p.m. on 08.04.2009. The cover – I will be opened at 3.30 pm on the same day. Cover – II will be opened on 09.04.2009 at 3.30 p.m. or on the date to be intimated later.

For further details, contact this Office during the Office hours.

P.R. 277 Director

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಸಮಯಾವಧಿ ವಿಸ್ತರಣೆ
ಐಎಫ್‌ಟಿ ಸಂಖ್ಯೆ:ಕೆಪಿಡಬ್ಲ್ಯುಡಿ:2008–09:ವರ್ಕ್ ಇಂಡೆಂಟ್:29:ಇ–ಪ್ರೊಕ್ಯೂರ್‌ಮೆಂಟ್:ಎಇ–2, ಮಂಗಳೂರು
ದಿನಾಂಕ: 6ನೇ ಮಾರ್ಚ್ 2009

ದಿನಾಂಕ:19.2.2009ರ 'ಉದಯವಾಣಿ' ಮತ್ತು "ಡೆಕ್ಕನ್ ಹೆರಾಲ್ಡ್" ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ನಂಬರ್ ಐಎಫ್‌ಟಿ ಸಂಖ್ಯೆ:ಕೆಪಿಡಬ್ಲ್ಯುಡಿ:2008–09:ವರ್ಕ್ ಇಂಡೆಂಟ್:29:ಇ–ಪ್ರೊಕ್ಯೂರ್‌ಮೆಂಟ್: ಎಇ–1 ದಿನಾಂಕ: 17.2.2009ರ ಹಾಗೂ ದಿನಾಂಕ: 21.2.2009ರ 'ವಾರ್ತಾಭಾರತಿ' ಮತ್ತು "ಕರಾವಳಿ ಅಲೆ" ಮತ್ತು ದಿನಾಂಕ: 23.2.2009ರ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್

ನೋಟಿಫಿಕೇಶನ್ ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(25)/(26)/ಇ–ಪ್ರೊಕ್ಯೂರ್‌ಮೆಂಟ್ (29):2008–09:ಎಇ–1:ದಿನಾಂಕ: 20.2.2009ರ ಪ್ರಕಟಣೆಯಲ್ಲಿ ಸೂಚಿಸಿದ ಈ ಕೆಳಗಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಆಹ್ವಾನಿಸಲಾದ ಟೆಂಡರ್ ಪ್ರಕಟಣೆಗೆ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
	ನಬಾರ್ಡ್ ಆರ್.ಐ.ಡಿ.ಎಫ್. – 14	
	ರಸ್ತೆಗಳು:–	
1.	ಮಂಗಳೂರು ತಾಲ್ಲೂಕಿನ ಪಡುಪಣಂಬೂರು ಚೆಲಿಯಾರು ಗ್ರಾಮದ ಸುಣ್ಣದಗೂಡು – ಕೆರೆಕಾಡು ರಸ್ತೆ ಅಭಿವೃದ್ಧಿ	67.70
2.	ಮಂಗಳೂರು ತಾಲ್ಲೂಕಿನ ಮುಚ್ಚೂರು – ವಿವೇಕನಗರ ರಸ್ತೆ ಅಭಿವೃದ್ಧಿ	50.50
3.	ಮಂಗಳೂರು ತಾಲ್ಲೂಕಿನ ಎಡಪದವು – ಬಾರ್ದಿಲ – ಕಾಪಿಕಾಡು ರಸ್ತೆ ಅಭಿವೃದ್ಧಿ.	90.00
4.	ಮಂಗಳೂರು ತಾಲ್ಲೂಕಿನ ಕಂದಾವರ – ಸುಂಕದಕಟ್ಟೆ – ಬೇಡೆಮಾರು ರಸ್ತೆ ಅಭಿವೃದ್ಧಿ (2ನೇ ಹಂತ)	60.00
5.	ಬಂಟ್ವಾಳ ತಾಲ್ಲೂಕಿನ ಹಿತ್ತಿಲುಸೊನಾರು – ಒಡಿಯೂರು – ಮಿತ್ತನಡ್ಕ ರಸ್ತೆ ಅಭಿವೃದ್ಧಿ	75.00
6.	ಪುತ್ತೂರು ತಾಲ್ಲೂಕಿನ ಕುಡ್ಡುಪದವು – ಅಮ್ಮೈ ರಸ್ತೆ ಅಭಿವೃದ್ಧಿ	100.00
7.	ಪುತ್ತೂರು ತಾಲ್ಲೂಕಿನ ಇವಮಾಡು – ಪಾಲೆಪಡ್ಡಿ ಅಮ್ಮೈ ರಸ್ತೆ ಅಭಿವೃದ್ಧಿ	69.00
8.	ಸುಳ್ಯ ತಾಲ್ಲೂಕಿನ ನರಕೋಡು – ಕೊಲ್ಲಾರು – ಬಂಡ್ಯಡ್ಕ ರಸ್ತೆ ಅಭಿವೃದ್ಧಿ	95.00
9.	ಬೆಳ್ತಂಗಡಿ ತಾಲ್ಲೂಕಿನ ಮಚೀನ ಗ್ರಾಮದ ಪರಡ್ಕ – ಥಾರೆಮಾರು ರಸ್ತೆ ಅಭಿವೃದ್ಧಿ	50.50
	ಸೇತುವೆಗಳು	
10.	ಪುತ್ತೂರು ತಾಲ್ಲೂಕಿನ ಉಪ್ಪಿನಗಂಡಿ – ಪೆರಿಯಡ್ಕ – ನಕ್ಕರೆ – ಕೊರಂಬಾಡಿ – ಹಿರೇಂಬಡಾಡಿ ರಸ್ತೆಯಲ್ಲಿ ಸೇತುವೆ ನಿರ್ಮಾಣ	100.00

1. ದಿನಾಂಕ:6.4.2009 ರಿಂದ 8.4.2009ರ ವರೆಗೆ ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ದಿನಾಂಕ: 8.4.2009ರ ವರೆಗೆ ಪಡೆಯಬಹುದಾಗಿರುತ್ತದೆ. (Download)
2. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 8.4.2009ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿರುವ ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಹಾಗೂ ನೋಟಿಫಿಕೇಷನ್‌ನ್ನು http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ಪಿ.ಆರ್. 278

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಮಂಗಳೂರು ವಿಭಾಗ, ಮಂಗಳೂರು

ಸಮಯಾವಧಿ ವಿಸ್ತರಣೆ

ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(26):2008–09:ಎಇ–2, ಮಂಗಳೂರು, ದಿನಾಂಕ: 6ನೇ ಮಾರ್ಚ್ 2009

ದಿನಾಂಕ:19.2.2009ರ 'ವಾರ್ತಾ ಭಾರತಿ ಮತ್ತು ದಿನಾಂಕ: 20.2.2009ರ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(26): 2008–09:ಎಇ–1 ದಿನಾಂಕ: 17.2.2009ರ ಹಾಗೂ ದಿನಾಂಕ: 21.2.2009ರ 'ವಾರ್ತಾಭಾರತಿ' ಮತ್ತು "ಕರಾವಳಿ ಅಲೆ" ಮತ್ತು ದಿನಾಂಕ: 23.2.2009ರ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ಸಂಖ್ಯೆ:8:ಜಿಎನ್‌ಎಲ್:ಟಿ.ಎನ್‌ಡಿ(25)/(26)/ಇ–ಪ್ರೊಕ್ಯೂರ್‌ಮೆಂಟ್ (29):2008–09:ಎಇ–1: ದಿನಾಂಕ:

20.2.2009ರ ಪ್ರಕಟಣೆಯಲ್ಲಿ ಸೂಚಿಸಿದ ಕಾಮಗಾರಿಗೆ ಸಂಬಂಧಿಸಿದಂತೆ ಆಹ್ವಾನಿಸಲಾದ ಟೆಂಡರ್ ಪ್ರಕಟಣೆಗೆ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
	ನಬಾರ್ಡ್ ಆರ್.ಐ.ಡಿ.ಎಫ್. – 14	
	ರಸ್ತೆಗಳು:–	
1.	ಮಂಗಳೂರು ತಾಲ್ಲೂಕಿನ ಕೊಣಾಜೆ ಕಲ್ಲುಗುಡ್ಡೆ ರಸ್ತೆ ಅಭಿವೃದ್ಧಿ	34.00
2.	ಬಂಟ್ವಾಳ ತಾಲ್ಲೂಕಿನ ನರಿಂಗಾನ – ಮೊರ್ಲ – ಬಂಡಸಾಲೆ ರಸ್ತೆ ಅಭಿವೃದ್ಧಿ	22.00
3.	ಬಂಟ್ವಾಳ ತಾಲ್ಲೂಕಿನ ಮುಚ್ಚಿರಪದವು – ಬದಿಯಾರ್ ರಸ್ತೆ ಅಭಿವೃದ್ಧಿ	45.00
4.	ಬೆಳ್ತಂಗಡಿ ತಾಲ್ಲೂಕಿನ ಕರಾಯ ಗ್ರಾಮದ ಕಲ್ಲೇರಿ – ಶಿವಗಿರಿ ರಸ್ತೆ ಅಭಿವೃದ್ಧಿ	22.20
	ಸೇತುವೆಗಳು	
5.	ಬಂಟ್ವಾಳ ತಾಲ್ಲೂಕಿನ ಬಾಲೆಪುಣಿ ಮಡಪಳ್ಳಿ ತಾಳಿಪಾಡಿ ರಸ್ತೆಯಲ್ಲಿ ಸೇತುವೆ ನಿರ್ಮಾಣ	28.80

1. ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ: 6.4.2009
2. ಖಾಲಿ ಟೆಂಡರು ಫಾರಂಗಳನ್ನು ನೀಡುವ ದಿನಾಂಕ: 6.4.2009
3. ಟೆಂಡರು ಸ್ವೀಕರಿಸುವ ಅಂತಿಮ ದಿನಾಂಕ: 8.4.2009ರ ಸಂಜೆ 4.00 ಗಂಟೆಯ ವರೆಗೆ

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್
ಪಿ.ಆರ್. 279 ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.

ವಾರ್ತಾ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು – 01

ಪ್ರಕಟಣೆಗಾಗಿ

ಸಂ:ವಾ.ಇ:ಪ್ರ:2008–09/22676–77, ದಿನಾಂಕ: 7ನೇ ಮಾರ್ಚ್ 2009

ವಾರ್ತಾ ಇಲಾಖೆಯಿಂದ ಪ್ರಕಟಗೊಳ್ಳುವ "ಜನಪದ" ಕನ್ನಡ ಮಾಸಿಕ ಪತ್ರಿಕೆ ಮತ್ತು 'ಮಾಚ್ ಆಫ್ ಕರ್ನಾಟಕ" ಆಂಗ್ಲ ಮಾಸಿಕ ಪತ್ರಿಕೆಗಳನ್ನು 2009ನೇ ಏಪ್ರಿಲ್ ಮಾಹೆಯಿಂದ 2010ನೇ ಫೆಬ್ರವರಿ ಮಾಹೆಯವರೆಗೆ ಮುದ್ರಿಸಿ ಸರಬರಾಜು ಮಾಡಲು ಆಫ್‌ಸೆಟ್ ಮಲ್ಟಿಪಲ್ ಕಲರ್ ಪ್ರಿಂಟರ್ಸ್‌ಗಳಿಂದ ದ್ವಿಲಕೋಟೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ನಮೂನೆಯನ್ನು ಪಡೆಯಲು ಅರ್ಜಿಯನ್ನು ದಿನಾಂಕ: 18.03.2009 ರಿಂದ 24.3.2009ರವರೆಗೆ ನಿರ್ದೇಶಕರು, ವಾರ್ತಾ ಇಲಾಖೆ, ಇವರ ಹೆಸರಿನಲ್ಲಿ ಬ್ಯಾಂಕ್‌ನಿಂದ ಪಡೆದ ರೂ. 2,000/– ಗಳ ಡಿ.ಡಿ.ಯೊಂದಿಗೆ ಉಪನಿರ್ದೇಶಕರು, ಪ್ರಕಟಣಾ ಶಾಖೆ, ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ) ಬೆಂಗಳೂರು–560001 ಇಲ್ಲಿಗೆ ಕಛೇರಿ ವೇಳೆಯಲ್ಲಿ ಸಲ್ಲಿಸಬಹುದು.

ದಿನಾಂಕ: 25.3.2009ರಿಂದ ದಿನಾಂಕ: 31.3.2009ರೊಳಗೆ ಕಚೇರಿ ವೇಳೆಯಲ್ಲಿ ಟೆಂಡರ್ ಫಾರಂನ್ನು ನೀಡಲಾಗುವುದು. ಭರ್ತಿ ಮಾಡಿದ ಫಾರಂನ್ನು ಸಲ್ಲಿಸಲು ಕೊನೆಯ ದಿನಾಂಕ: 4.4.2009 ಮಧ್ಯಾಹ್ನ 3.30 ಗಂಟೆ. ಸಾಧ್ಯವಾದಲ್ಲಿ ಟೆಂಡರ್ ಲಕೋಟೆಯನ್ನು ಅಂದೇ ತೆರೆಯಲಾಗುವುದು. ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯ ಪ್ರಕಟಣಾ ಶಾಖೆಯ ಉಪನಿರ್ದೇಶಕರಿಂದ ಪಡೆಯಬಹುದು.

ಎನ್.ಆರ್. ವಿಶುಕುಮಾರ್
ಪಿ.ಆರ್. 280 ನಿರ್ದೇಶಕರು, ವಾರ್ತಾ ಇಲಾಖೆ

ಪೊಲೀಸ್ ಇಲಾಖೆ

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್‌ರವರ ಕಛೇರಿ, ಕರ್ನಾಟಕ ರಾಜ್ಯ, ಬೆಂಗಳೂರು–560 001

ಟೆಂಡರ್ ಪ್ರಕಟಣೆ

ಸಂಖ್ಯೆ: ಸಂಗ್ರಹ–2(4)53/2007–08, ದಿನಾಂಕ: 13ನೇ ಮಾರ್ಚ್ 2009

ಪೊಲೀಸ್ ಇಲಾಖೆಯ ಪೊಲೀಸ್ ಮುದ್ರಣಾಲಯಕ್ಕೆ ಒಂದು ಸಂಖ್ಯೆ Autoprint Knight Mini Offset Printer with all standard accessories & Electrical equipments ಗಳನ್ನು ಸರಬರಾಜು ಮಾಡಿ ಅಳವಡಿಸಲು ಮೊಹರು ಮಾಡಿರುವ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಸೂಚನೆ: ಮೇಲಿನ ಉಪಕರಣದ ಉತ್ಪಾದಕರು / ಉತ್ಪಾದಕ ಘಟಕದ ಅಧಿಕೃತ ಏಜೆಂಟುದಾರರು ಹಾಗೂ ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರಖ್ಯಾತ ಕಂಪನಿಯ ಬ್ರಾಂಡ್‌ಗಳಿಗೆ ಆದ್ಯತೆ ನೀಡಲಾಗುವುದು.

ಟೆಂಡರ್ ಅರ್ಜಿಗಳನ್ನು ಸಾಮಗ್ರಿಯ ನಿರ್ದಿಷ್ಟತೆ/ವಿಶಿಷ್ಟತೆಯ ಮೂಲಕ (Specification) ದಿನಾಂಕ: 23.03.2009 ರಿಂದ 21.04.2009ರ ವರೆಗೆ ಕೆಲಸಗಳ ದಿನದಂದು ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯೊಳಗೆ ಈ ಕಛೇರಿಯಲ್ಲಿ ಪಡೆಯಬಹುದು. ಪ್ರತಿ ಟೆಂಡರ್ ಅರ್ಜಿ ನಮೂನೆಯ ಬೆಲೆ ರೂ.1,000/– ಆಗಿದ್ದು, ಇದನ್ನು ಮರುಪಾವತಿ ಮಾಡಲಾಗುವುದಿಲ್ಲ. ಈ ಅರ್ಜಿಯ ಬೆಲೆಯನ್ನು ನಗದು ಅಥವಾ ಡಿ.ಡಿ. ಮೂಲಕ ಮಾತ್ರ ಪಾವತಿಸಬಹುದಾಗಿದೆ (ಮನಿಯಾರ್ಡರ್‌ನಲ್ಲಿ ಪಾವತಿಸಿದರೆ ತಿರಸ್ಕರಿಸಲಾಗುವುದು). ಟೆಂಡರ್ ಅರ್ಜಿಯನ್ನು ಅಂಚೆ ಮೂಲಕ ಪಡೆಯಲು ಇಚ್ಛಿಸುವವರು ರೂ.1,100/– ಗಳಿಗೆ ಡಿ.ಡಿ.ಯನ್ನು (ಅರ್ಜಿ ಶುಲ್ಕ ರೂ.1,000/– + ಅಂಚೆ ವೆಚ್ಚ ರೂ.100/–) ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಬೆಂಗಳೂರು ರವರ ಹೆಸರಿನಲ್ಲಿ ಪಡೆದು ಕಳುಹಿಸಲು ಕೋರಲಾಗಿದೆ. ಟೆಂಡರ್ ಅರ್ಜಿಯನ್ನು ಮೊಹರು ಮಾಡಿದ ಎರಡು ಪ್ರತ್ಯೇಕ ಕವರುಗಳಲ್ಲಿ **"ಸರಬರಾಜು ಮಾಡುವ ಸಾಮಗ್ರಿಗಳಿಗೆ ದರಪಟ್ಟಿ"** ಎಂದು ಮೇಲ್ಭಾಗದಲ್ಲಿ ಬರೆದು, ಅರ್ಜಿದಾರರ ವಿಳಾಸವನ್ನು ಕೆಳಗಡೆ ನಮೂದಿಸುವುದು.

ಭರ್ತಿ ಮಾಡಿದ ಟೆಂಡರ್ ಅರ್ಜಿ ನಮೂನೆಗಳನ್ನು ಹಾಗೂ ಶೇಕಡ 2ರಷ್ಟು ಇ.ಎಂ.ಡಿ.ಯನ್ನು ಪ್ರತಿ ಉಪಕರಣದ ಮೌಲ್ಯಕ್ಕೆ ಮುಂಗಡ ಠೇವಣಿಯನ್ನು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರ ಹೆಸರಿನಲ್ಲಿ ಪಡೆದ ಡಿ.ಡಿ. ಮೂಲಕ ಹಾಗೂ ಮಾದರಿಯ ಬ್ರೋಚರ್ಸ್, ಕ್ಯಾಟ್ಲಾಗ್ಸ್ ವಿತ್ ಟೆಕ್ನಿಕಲ್ ಸ್ಪೆಸಿಫಿಕೇಷನ್, ಆರ್ಥಿಕ ಸ್ಥಿತಿ, ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಬಗ್ಗೆ, ವಾರ್ಷಿಕ ವಹಿವಾಟು ಮತ್ತು ಇತರೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕಛೇರಿಯ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ (ಕೇಂದ್ರಸ್ಥಾನ–1) ರವರಾದ ಶ್ರೀ ಸಿ. ಚಂದ್ರಶೇಖರ್, ಐ.ಪಿ.ಎಸ್. ರವರಿಗೆ ಹೆಸರಿಸಿ, ದಿನಾಂಕ: 21.04.2009ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಈ ದಿನಾಂಕದ ನಂತರದ ಟೆಂಡರ್‌ಗಳನ್ನು ಅಂಗೀಕರಿಸಲಾಗುವುದಿಲ್ಲ.

ಸ್ವೀಕರಿಸಿದ ಟೆಂಡರ್‌ಗಳನ್ನು ದಿನಾಂಕ: 22.04.2009 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಟೆಂಡರ್‌ದಾರರು ಟೆಂಡರ್‌ಗಳನ್ನು ತೆರೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು.

ಪ್ರತಿ ಉಪಕರಣಗಳಿಗೆ ಪ್ರತ್ಯೇಕವಾಗಿ ಇ.ಎಂ.ಡಿ.ಯನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಟೆಂಡರ್‌ದಾರರು ಅಂಚೆ ಮೂಲಕ / ಕೊರಿಯರ್ ಮೂಲಕ ಕಳುಹಿಸುವ ಟೆಂಡರ್ ಅರ್ಜಿ ಮತ್ತು ದಾಖಲಾತಿಗಳು ತಡವಾಗಿ ತಲುಪಿದಲ್ಲಿ / ನಾಶವಾದಲ್ಲಿ ಇಲಾಖೆಯು ಜವಾಬ್ದಾರಿಯಲ್ಲ. ಇಲಾಖೆಯು ಯಾವುದೇ ಕಾರಣವನ್ನು ನೀಡದೆ ಸಾರಾಸಗಟಾಗಿ / ಭಾಗಶಃ ಒಪ್ಪಿಕೊಳ್ಳುವ, ಹೆಚ್ಚು ಮತ್ತು ಕಡಿಮೆ ಮಾಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್‌ರವರ ಪರವಾಗಿ

POLICE DEPARTMENT

Office of the Director General and Inspector General of Police,

No.2, Nrupathunga Road, Bangalore

TENDER NOTICE

No.STS-II(4)53/2007-08, Bangalore, Dated: 13th March 2009

Sealed tenders are invited for **supply & installation of One No. Autoprint Knight Mini Offset Printer with all standard accessories & Electrical equipments** to Police Printing Press of Police Department.

Note: Preference will be given to manufacturing unit/reputed agent and reputed brands available in the market.

Tender forms containing detailed terms and conditions and **specification of item** can be obtained from this office between 10.00 am to 4.00 pm. on any working day from 23.03.2009 to 21.04.2009. The cost of each tender form is 1,000/- (Rupees One Thousand only) payable in the form of Cash or DD which is non refundable (money order will not be accepted). The Tenderer who desires to obtain tender form by post may send DD for Rs.1,100/- (Rs.1,000/- towards application fee and Rs.100/- towards postage charges) drawn in favour of Director General and Inspector General of Police, Karnataka

State, Bangalore. Tender should be submitted in duplicate in two sealed envelopes duly superscribed on the top as **"Quotation for the Supply of Items"** with the addres of the firm on the cover.

The envelope should contain duly filled tender application along with D.D. drawn in favour of Director General and Inspector General of Police, Karnataka State, Bangalore towards E.M.D. (The E.M.D. should be equivalent to 2% of value of each goods, rate quoted by the tenderers) Financial Status, Technical and Service capability, Sale tax, Income tax details, Annual turnover details Brochures, Catalogues with technical specification. This envelope should be addressed to Sri C. Chandrashekar IPS, Inspector General of Police, Headquarters-I, and submit before 5.00 pm on or before 21.04.2009. Tender applications received after due date will not be considered. The received tenders in envelope will be opened in this office at 11.00 AM on 22.04.2009. Interested persons can participate in the proceedings of opening tenders.

The tenders received without separate Earnest Money Deposit (E.M.D.) for each item in the form of Demand Draft shall run the risk of rejection. The Department will not be responsible for any delay, loss, damage or non receipt of request/ tender documents/ tender sent by posts/ courier etc., Department's right to accept/ reject/ split any or all tenders without assigning any reasons is reserved.

P.R. 282 For Director General and Inspector General of Police.

ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಂಶೋಧನೆ, ಅರೆಕೆರೆ ಮೈಕೋ ಲೇಔಟ್, ಬನ್ನೇರುಘಟ್ಟ ರಸ್ತೆ, ದೊರೆಸಾನಿಪಾಳ್ಯ, ಬೆಂಗಳೂರು – 560 076

ಹರಾಜು ಪ್ರಕಟಣೆ

ಸಂಖ್ಯೆ: ಎ4–ಎಸ್ ಎಎಸ್–ಸಿಆರ್–7/2008–09, ದಿನಾಂಕ: 9ನೇ ಮಾರ್ಚ್ 2009

ವಿಷಯ: ಬೆಂಗಳೂರು ಸಂಶೋಧನಾ ವಲಯದ ದೊರೆಸಾನಿಪಾಳ್ಯ ಸಂಶೋಧನಾ ಕೇಂದ್ರದಲ್ಲಿ ಕಟಾವು ಮಾಡಿರುವ ಅಕೇಶಿಯಾ ಅರಿಕ್ಯುಲಿಫಾರ್ಮಿಸ್ ಎಳೆಗಳು, ಸೌದೆ, ಬಿಲ್ಲೆಟ್ಸ್ ಮತ್ತು ನಾಟಗಳನ್ನು ಹರಾಜಿನ ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ವೃತ್ತದ ಬೆಂಗಳೂರು ಸಂಶೋಧನಾ ವಲಯದ ದೊರೆಸಾನಿಪಾಳ್ಯ ಸಂಶೋಧನಾ ಕೇಂದ್ರದಲ್ಲಿ ಕಟಾವು ಮಾಡಿರುವ ಅಕೇಶಿಯಾ ಅರಿಕ್ಯುಲಿಫಾರ್ಮಿಸ್ ಎಳೆಗಳು, ಸೌದೆ, ಬಿಲ್ಲೆಟ್ಸ್ ಮತ್ತು ನಾಟಗಳನ್ನು ದಿನಾಂಕ: 16.04.2009 ರಂದು ಬೆಳಿಗ್ಗೆ 11.00 ಗಂಟೆಗೆ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಇವರು ಅಥವಾ ಇವರಿಂದ ಅಧಿಕಾರ ಪಡೆದ ಅಧಿಕಾರಿಗಳು ಈ ಪ್ರಕಟಣೆಯಲ್ಲಿರುವ ಷರತ್ತುಗಳಿಗನುಗುಣವಾಗಿ ಕೆಳಗಿನ ತಪ್ಶೀಲಿನಲ್ಲಿ ಸೂಚಿಸಿರುವ ಪ್ರಕಾರ ಬಹಿರಂಗ ಹರಾಜಿನ ಮೂಲಕ ದಿನಾಂಕ: 16.04.2009 ರಂದು ಮಾರಾಟ ಮಾಡುವರು. ಸದರಿ ದಿನಾಂಕದಂದು ಕಾರಣಾಂತರದಿಂದ ಹರಾಜು ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 20.04.2009 ರಂದು ಬೆಳಿಗ್ಗೆ 11.00 ಗಂಟೆಗೆ ಎರಡನೇ ಬಾರಿಗೆ ಮಾರಾಟ ಮಾಡುವರು. ಇಚ್ಛೆಯುಳ್ಳವರು ಭಾಗವಹಿಸಿ ಪಡೆಯಬಹುದು.

ತಪ್ಶೀಲು

ಕ್ರ. ಸಂ.	ಸಂಶೋಧನಾ ವಲಯದ ಹೆಸರು	ಮಾರಾಟ ಮಾಡುವ ಸ್ಥಳ	ಹರಾಜಿನ ದಿನಾಂಕ ಮತ್ತು ವೇಳೆ	ಹರಾಜಿನಲ್ಲಿ ಭಾಗವಹಿಸುವವರು ಕಟ್ಟಬೇಕಾದ ಠೇವಣಿ ಹಣ
1.	ಬೆಂಗಳೂರು ಸಂಶೋಧನಾ ವಲಯದ ದೊರೆಸಾನಿಪಾಳ್ಯ ಸಂಶೋಧನಾ ಕೇಂದ್ರದಲ್ಲಿ ಕಟಾವು ಮಾಡಿರುವ ಅಕೇಶಿಯಾ ಅರಿಕ್ಯುಲಿಫಾರ್ಮಿಸ್ ಎಳೆಗಳು, ಸೌದೆ, ಬಿಲ್ಲೆಟ್ಸ್ ಮತ್ತು ನಾಟಗಳು	ದೊರೆಸಾನಿಪಳ್ಯ ಸಂಶೋಧನಾ ಕೇಂದ್ರ ಬೆಂಗಳೂರು	ದಿನಾಂಕ: 16.04.2009 ರಂದು ಬೆಳಿಗ್ಗೆ 11.00 ಗಂಟೆಗೆ	ಹರಾಜಿನಲ್ಲಿ ಭಾಗವಹಿಸುವವರು ರೂ. 3,000/– (ಮೂರು ಸಾವಿರ ಮಾತ್ರ) ನಗದು ಹಣವನ್ನು ಹರಾಜಿಗೆ ಮುಂಚಿತವಾಗಿ ಪಾವತಿಸುವುದು
I	**Acacia Auriculiformis Timber: Lot Nos.** 1. 1 No.	0.148 cmtr		

ಕ್ರ. ಸಂ.	ಸಂಶೋಧನಾ ವಲಯದ ಹೆಸರು	ಮಾರಾಟ ಮಾಡುವ ಸ್ಥಳ	ಹರಾಜಿನ ದಿನಾಂಕ ಮತ್ತು ವೇಳೆ	ಹರಾಜಿನಲ್ಲಿ ಭಾಗವಹಿಸುವವರು ಕಟ್ಟಬೇಕಾದ ಠೇವಣಿ ಹಣ
	3. 3 Nos.	0.377 cmtr		
	4. 4 Nos.	0.478 cmtr		
	13. 1 No.	0.130 cmtr		
	15. 1 No.	0.206 cmtr		
	17. 1 No.	0.196 cmr		
	23. 5 Nos	0.512 cmtr		
	24. 6 Nos	0.431 cmtr		
	33. 4 nos	0.890 cmtr		
	35. 2 Nos.	0.597 cmtr		
	36. 1 No.	0.290 cmtr		
	37. 3 Nos.	0.547 cmtr		
	41. 2 Nos.	0.307 cmtr		
	49. 4 Nos.	0.354 cmtr		
	51. 4 Nos.	0.772 cmtr		
	52. 3 Nos.	0.519 cmtr		
	54. 3 Nos.	0.792 cmtr		
	55. 4 Nos.	0.786 cmtr		
	63. 3 Nos.	0.620 cmtr		
	69. 1 No.	0.103 cmtr		
	71. 1 No.	0.162 cmtr		
II	**Acacia Auriculiformis Poles:**			
	Lot Nos.			
	2. IIa category	3 Nos.		
	7. IIa category	25 Nos.		
	19. IIa category	14 Nos.		
	25. IIa category	15 Nos.		
	32. IIa category	6 Nos.		
	34. IIa category	3 Nos.		
	38. IIa category	6 Nos.		
	42. IIa category	3 Nos.		
	43. IIa category	39 Nos.		
	47. IIa category	12 Nos.		
	50. IIa category	7 Nos.		
	58. IIa category	8 Nos.		
	59. IIa category	6 Nos.		
	62. IIa category	8 Nos.		
	64. IIa category	3 Nos.		
	65. IIa category	12 Nos.		
	67. IIa category	7 Nos.		
	70. IIa category	3 Nos.		
	5. IIb category	21 Nos.		

ಕ್ರ. ಸಂ.	ಸಂಶೋಧನಾ ವಲಯದ ಹೆಸರು	ಮಾರಾಟ ಮಾಡುವ ಸ್ಥಳ	ಹರಾಜಿನ ದಿನಾಂಕ ಮತ್ತು ವೇಳೆ	ಹರಾಜಿನಲ್ಲಿ ಭಾಗವಹಿಸುವವರು ಕಟ್ಟಬೇಕಾದ ಠೇವಣಿ ಹಣ
	6. IIb category	24 Nos.		
	8. IIIa category	6 Nos.		
	11. IIIa category	4 Nos.		
	12 IIb category	7 Nos.		
	14. IIIa category	8 Nos.		
	20. IIb category	15 Nos.		
	21. IIb category	36 Nos.		
	26. IIIa category	27 Nos.		
	28. IIIb category	14 Nos.		
	31. IIIa category	5 Nos.		
	39. IIb category	11 Nos.		
	44. IIIa category	37 Nos.		
	46. IIb category	36 Nos.		
	53. Ia category	1 No.		
	56. IIIb category	14 Nos.		
	57. IIIa category	8 Nos.		
	60. IIIa category	12 Nos.		
	66. IIb category	7 Nos.		
	68. IIIa category	3 Nos.		
III	**Firewood:**			
	9.	1.90 cum		
	29.	3 cum		
	30.	5.6 cum		
	40.	5.5 cum		
	48.	3.8 cum		
	61.	5.3 cum		
IV	**Acacia auriculiformis Billets:**			
	10.	10 Nos.		
	16.	3 Nos.		
	18.	25 Nos.		
	27.	11 Nos.		
	45.	7 Nos.		

ಹೆಚ್ಚಿನ ಮಾಹಿತಿಯನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ನಿಬಂಧನೆಗಳು

1. ಹರಾಜನ್ನು ದಿನಾಂಕ: 16.04.2009 ರಂದು ಬೆಳಿಗ್ಗೆ 11.00 ಗಂಟೆಗೆ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ನಡೆಸುವರು ಮತ್ತು ಮೇಲ್ಕಂಡ ದಿನಾಂಕದಂದು ಕಾರಣಾಂತರದಿಂದ ಹರಾಜು ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 20.04.2009 ಬೆಳಿಗ್ಗೆ 11.00 ಗಂಟೆಗೆ ಎರಡನೇ ಬಾರಿಗೆ ನಡೆಸಲಾಗುವುದು. ಇಚ್ಛೆಯುಳ್ಳವರು ಭಾಗವಹಿಸಬಹುದು. ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.
2. ಹಿಂದಿನ ಹರಾಜಿನಲ್ಲಿ ವಿಜೇತರಾಗಿ ಪಡೆದ ಬಾಬ್ತು ಬಾಕಿ ಹೊಂದಿರುವ ಬಿಡ್‌ದಾರರು / ಅರಣ್ಯ ಗುತ್ತಿಗೆದಾರರು ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

3. ಯಶಸ್ವಿ ಬಿಡ್‌ದಾರರು ಹರಾಜು ಮುಗಿದ ಕೂಡಲೇ ಹರಾಜಿನ ಪೂರ್ಣ ಹಣದೊಂದಿಗೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಪೂರ್ಣವಾಗಿ ಪಾವತಿಸತಕ್ಕದ್ದು. ತಪ್ಪಿದಲ್ಲಿ ಅಂತಹವರ ಇ.ಎಂ.ಡಿ. ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಹರಾಜಿನ ನಿಯಮದಂತೆ ಕ್ರಮ ತೆಗೆದುಕೊಳ್ಳಲಾಗುವುದು.
4. ಮೇಲ್ಕಂಡ ಹರಾಜಿನಲ್ಲಿ ಭಾಗವಹಿಸುವ ಮುನ್ನ ಬಿಡ್ ಮಾಡಿ ಖರೀದಿಸಲು ಅಪೇಕ್ಷೆ ಉಳ್ಳವರು ಸಂಶೋಧನಾ ವಲಯ ಅರಣ್ಯಾಧಿಕಾರಿಗಳು, ಬೆಂಗಳೂರು ರವರನ್ನು ಸಂಪರ್ಕಿಸಿ, ನೋಡಲು ಅನುಮತಿ ಪಡೆದು ಸಂಶೋಧನಾ ಕೇಂದ್ರ ಪ್ರದೇಶದಲ್ಲಿರುವ ಅಕೇಶಿಯಾ ಅರಿಕ್ಯುಲಿಫಾರ್ಮಿಸ್ ಎಳೆಗಳು, ಸೌದೆ, ಬಿಲ್ಲೆಟ್ಸ್ ಮತ್ತು ನಾಟಗಳನ್ನು ಪರಿಶೀಲಿಸಿಕೊಳ್ಳಬಹುದು.
5. ಯಾವುದೇ ಕಾರಣಗಳನ್ನು ನೀಡದೇ ಹರಾಜನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ಇವರು ಕಾಯ್ದಿರಿಸಿಕೊಂಡಿರುತ್ತಾರೆ.
6. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರು ಡಿಫಾಲ್ಟರ್ ಆಗಿದ್ದರೆ ಅಂತಹವರು ಹರಾಜಿನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
7. ಹರಾಜಿನಲ್ಲಿ ಸಫಲರಾದ ಗುತ್ತಿಗೆದಾರರು ಸೂರ್ಯೋದಯದ ನಂತರ ಮತ್ತು ಸೂರ್ಯಾಸ್ತದ ಮೊದಲು ಹರಾಜಿಗಿಟ್ಟ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕು.
8. ಹರಾಜಿಗೆ ಸಂಬಂಧಿಸಿದಂತೆ ಅರಣ್ಯ ಸಂರಕ್ಷಣಾಧಿಕಾರಿಗಳು, ಸಂಶೋಧನೆ, ಬೆಂಗಳೂರು ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

ಪಿ.ಆರ್. 284 ಅರಣ್ಯ ಸಂರಕ್ಷಣಾಧಿಕಾರಿ, ಸಂಶೋಧನೆ, ಬೆಂಗಳೂರು.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಮಯಾವಧಿ ವಿಸ್ತರಣೆ

ಐಎಫ್‌ಟಿ ಸಂಖ್ಯೆ:ಕೆಪಿಡಬ್ಲ್ಯುಡಿ:2008–09:ವರ್ಕ್ ಇಂಡೆಂಟ್:30:ಇ–ಪ್ರೊಕ್ಯೂರ್‌ಮೆಂಟ್:ಎಇ–1, ಮಂಗಳೂರು, ದಿನಾಂಕ: 21ನೇ ಮಾರ್ಚ್ 2009

ದಿನಾಂಕ:14.3.2009ರ 'ಸಂಯುಕ್ತ ಕರ್ನಾಟಕ' ಮತ್ತು 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ನಂಬರ್ ಐಎಫ್‌ಟಿ ಸಂಖ್ಯೆ:ಕೆಪಿಡಬ್ಲ್ಯುಡಿ:2008–09:ವರ್ಕ್ ಇಂಡೆಂಟ್:30:ಇ–ಪ್ರೊಕ್ಯೂರ್‌ಮೆಂಟ್:ಎಇ–1 ದಿನಾಂಕ: 7.3.2009ರ ಪ್ರಕಟಣೆಯಲ್ಲಿ ಸೂಚಿಸಿದ ಈ ಕೆಳಗಿನ ಕಾಮಗಾರಿಗಳಿಗೆ ಕಾಮಗಾರಿಗೆ ಸಂಬಂಧಿಸಿದಂತೆ ಆಹ್ವಾನಿಸಲಾದ ಟೆಂಡರ್ ಪ್ರಕಟಣೆಗೆ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)
	5054 – ರಸ್ತೆ ಮತ್ತು ಸೇತುವೆ	
	ರಸ್ತೆಗಳು:–	
1.	ಸುಳ್ಯ ಕ್ಷೇತ್ರದ ಸುಳ್ಯ ತಾಲ್ಲೂಕಿನ ಪಂಜ ಕಡಬ ರಸ್ತೆ ಕಿಮೀ.5.60 ರಿಂದ 9.60ರ ವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ	60.00

1. ದಿನಾಂಕ: 1.4.2009 ರಿಂದ 8.4.2009 ರ ವರೆಗೆ ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ದಿನಾಂಕ: 8.4.2009ರ ವರೆಗೆ ಪಡೆಯಬಹುದಾಗಿರುತ್ತದೆ. (Download)
2. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 8.4.2009ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಇ – ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ ಜಾಲದ ವೆಬ್‌ಸೈಟ್ https//eproc.karnataka.gov.in ನಲ್ಲಿರುವ ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಹಾಗೂ ನೋಟಿಫಿಕೇಷನ್ನು http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್

ಪಿ.ಆರ್. 285 ಲೋಕೋಪಯೋಗಿ, ಬಂದರು ಮತ್ತು ಒಳನಾಡು

ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು.